Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
( ವಿಶೇಷ ಸಂಚಿಕೆ )

भाग IX — अनुभाग 1
PART IX — SECTION 1
ಭಾಗ IX — ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.


सं–1 नई दिल्ली सोमवार, जनवरी 20, 1992 — पुष्य 30, 1913 (शक) — खन्ड–13
ಸಂಖ್ಯೆ ೧ ನವದೆಹಲಿ ಸೋಮವಾರ, ಜನವರಿ ೨೦, ೧೯೯೨ — ಪುಷ್ಯ ೩೦, ೧೯೧೩ (ಶಕ) — ಸಂಪುಟ ೧೩
No. 1 New Delhi Monday, January 20, 1992 — Pushya 30, 1913 (Saka) — Vol. 13


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely—(1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ ಅಧಿನಿಯಮ, ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) ತೂಕ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ (೧೯೭೩ರ ೫೦)ರ ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ - (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹನ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) [illegible] ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) [illegible] ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ [illegible] ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ [illegible] ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) [illegible] ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು [illegible] 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ [illegible] ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕುಟುಂಬ ನ್ಯಾಯಾಲಯ ಅಧಿನಿಯಮ, 1984

## (1984ರ 66)

ವಿವಾಹ ಮತ್ತು ಕೌಟುಂಬಿಕ ವ್ಯವಹಾರಗಳಿಗೆ ಸಂಬಂಧಿಸಿದ ವಿವಾದಗಳಲ್ಲಿ ಸಂಧಾನವನ್ನು ಪ್ರವರ್ಧಿಸಲು ಮತ್ತು ಅವುಗಳ ಶೀಘ್ರ ಇತ್ಯರ್ಥವನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ಕುಟುಂಬ ನ್ಯಾಯಾಲಯಗಳ ಸ್ಥಾಪನೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೈದನೆಯ ವರ್ಷದಲ್ಲಿ ಇದು ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:—

### ಅಧ್ಯಾಯ—I

### ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**—(1) ಈ ಅಧಿನಿಯಮವನ್ನು ಕುಟುಂಬ ನ್ಯಾಯಾಲಯಗಳ ಅಧಿನಿಯಮ, 1984 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.**—ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,—

(ಕ) "ನ್ಯಾಯಾಧೀಶ" ಎಂದರೆ ಕುಟುಂಬ ನ್ಯಾಯಾಲಯದ ನ್ಯಾಯಾಧೀಶ ಅಥವಾ ಸಂದರ್ಭಾನುಸಾರ ಪ್ರಧಾನ ನ್ಯಾಯಾಧೀಶ, ಅಡಿಷನಲ್ ಪ್ರಧಾನ ನ್ಯಾಯಾಧೀಶ ಅಥವಾ ಇತರ ನ್ಯಾಯಾಧೀಶ;

(ಖ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಗ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಘ) "ಕುಟುಂಬ ನ್ಯಾಯಾಲಯ" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಕುಟುಂಬ ನ್ಯಾಯಾಲಯ;

(ಙ) ಈ ಅಧಿನಿಯಮದಲ್ಲಿ ಬಳಸಿದ ಆದರೆ ಪರಿಭಾಷಿಸಿರದ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಇದರಲ್ಲಿ ಪರಿಭಾಷಿಸಿದ ಇತರ ಎಲ್ಲಾ ಪದಗಳು ಮತ್ತು ಪದಾವಳಿಗಳು ಆ ಸಂಹಿತೆಯಲ್ಲಿ ಅವುಗಳಿಗೆ ಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕದ್ದು.

### ಅಧ್ಯಾಯ—II

### ಕುಟುಂಬ ನ್ಯಾಯಾಲಯಗಳು

3. **ಕುಟುಂಬ ನ್ಯಾಯಾಲಯಗಳ ಸ್ಥಾಪನೆ.**—(1) ಈ ಅಧಿನಿಯಮದ ಮೂಲಕ ಕುಟುಂಬ ನ್ಯಾಯಾಲಯಗಳಿಗೆ ಪ್ರದತ್ತವಾದ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ, ರಾಜ್ಯಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಅಧಿಸೂಚನೆಯ ಮೂಲಕ,—

(ಕ) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ ಒಂದು ದಶಲಕ್ಷಕ್ಕೂ ಮೀರಿದ ಜನಸಂಖ್ಯೆಯನ್ನು ಹೊಂದಿರುವ ಒಂದು ನಗರ ಅಥವಾ ಪಟ್ಟಣವನ್ನೊಳಗೊಂಡ ರಾಜ್ಯದಲ್ಲಿನ ಪ್ರದೇಶಕ್ಕಾಗಿ ಒಂದು ಕುಟುಂಬ ನ್ಯಾಯಾಲಯವನ್ನು ಸ್ಥಾಪಿಸತಕ್ಕದ್ದು;

(ಖ) ಅದು ಅವಶ್ಯವೆಂದು ಭಾವಿಸಬಹುದಾದ ಇತರ ಪ್ರದೇಶಗಳಿಗಾಗಿ ಕುಟುಂಬ ನ್ಯಾಯಾಲಯಗಳನ್ನು ಸ್ಥಾಪಿಸಬಹುದು;

(2) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ, ಕುಟುಂಬ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ವ್ಯಾಪಿಸತಕ್ಕಂಥ ಪ್ರದೇಶದ ಸ್ಥಳೀಯ ಪರಿಮಿತಿಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಯಾವುದೇ ಕಾಲದಲ್ಲಿ ಅಂತಹ ಪರಿಮಿತಿಗಳನ್ನು ಹೆಚ್ಚಿಸಬಹುದು, ಕಡಿಮೆ ಮಾಡಬಹುದು ಅಥವಾ ಬದಲಾಯಿಸಬಹುದು.

4. **ನ್ಯಾಯಾಧೀಶರ ನೇಮಕಾತಿ.**—(1) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಸಹಮತಿಯೊಂದಿಗೆ ಒಬ್ಬ ಅಥವಾ ಹೆಚ್ಚಿನ ವ್ಯಕ್ತಿಗಳನ್ನು ಕುಟುಂಬ ನ್ಯಾಯಾಲಯದ ನ್ಯಾಯಾಧೀಶ ಅಥವಾ ನ್ಯಾಯಾಧೀಶರುಗಳನ್ನಾಗಿ ನೇಮಿಸಬಹುದು.

(2) **ಕುಟುಂಬ ನ್ಯಾಯಾಲಯವು ಒಬ್ಬರಿಗಿಂತ ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡಿರುವಾಗ,—**

(ಕ) ಆ ನ್ಯಾಯಾಧೀಶರಲ್ಲಿ ಪ್ರತಿಯೊಬ್ಬ ನ್ಯಾಯಾಧೀಶನು ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಆ ನ್ಯಾಯಾಲಯಕ್ಕೆ ಪ್ರದತ್ತವಾದ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಚಲಾಯಿಸಬಹುದು;

(ಖ) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಸಹಮತಿಯೊಂದಿಗೆ, ನ್ಯಾಯಾಧೀಶರಲ್ಲಿ ಯಾರನ್ನಾದರೂ ಪ್ರಧಾನ ನ್ಯಾಯಾಧೀಶರನ್ನಾಗಿ ಮತ್ತು ಯಾವನೇ ಇತರ ನ್ಯಾಯಾಧೀಶನನ್ನು ಅಡಿಷನಲ್ ಪ್ರಧಾನ ನ್ಯಾಯಾಧೀಶರನ್ನಾಗಿ ನೇಮಕ ಮಾಡಬಹುದು;

(ಗ) ಪ್ರಧಾನ ನ್ಯಾಯಾಧೀಶನು ಕಾಲಕಾಲಕ್ಕೆ ನ್ಯಾಯಾಲಯದ ವಿವಿಧ ನ್ಯಾಯಾಧೀಶರಲ್ಲಿ ಅದರ ವ್ಯವಹಾರವನ್ನು ಹಂಚುವುದಕ್ಕಾಗಿ ಅವನು ಸೂಕ್ತವೆಂದು ಭಾವಿಸಬಹುದಾದುದಂತಹ ವ್ಯವಸ್ಥೆಗಳನ್ನು ಮಾಡಬಹುದು;

(ಘ) ಅಡಿಷನಲ್ ಪ್ರಧಾನ ನ್ಯಾಯಾಧೀಶನು, ಪ್ರಧಾನ ನ್ಯಾಯಾಧೀಶನ ಪದವು ಖಾಲಿಯಾದ ಸಂದರ್ಭದಲ್ಲಿ ಅಥವಾ ಗೈರು ಹಾಜರಿ, ಕಾಯಿಲೆ ಅಥವಾ ಇತರ ಯಾವುದೇ ಕಾರಣದಿಂದ ಪ್ರಧಾನ ನ್ಯಾಯಾಧೀಶನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಪ್ರಧಾನ ನ್ಯಾಯಾಧೀಶನ ಅಧಿಕಾರಗಳನ್ನು ಚಲಾಯಿಸಬಹುದು.

(3) ಒಬ್ಬ ವ್ಯಕ್ತಿಯು ಅವನು,—

(ಕ) ಭಾರತದಲ್ಲಿ ನ್ಯಾಯಿಕ ಪದವನ್ನು ಅಥವಾ ಕಾನೂನಿನ ವಿಶೇಷ ಜ್ಞಾನವು ಅಗತ್ಯವಿರುವ ಸಂಘದ ಅಥವಾ ರಾಜ್ಯದ ಅಧೀನದಲ್ಲಿರುವ ನ್ಯಾಯಾಧೀಕರಣದ ಸದಸ್ಯನ ಪದವನ್ನು ಅಥವಾ ಯಾವುದೇ ಹುದ್ದೆಯನ್ನು ಕನಿಷ್ಠ ಪಕ್ಷ ಏಳು ವರ್ಷಗಳವರೆಗೆ ಧಾರಣ ಮಾಡಿದ್ದ ಹೊರತು; ಅಥವಾ

(ಖ) ಉಚ್ಚ ನ್ಯಾಯಾಲಯದ ಅಥವಾ ಕ್ರಮಶಃ ಎರಡು ಅಥವಾ ಹೆಚ್ಚಿನ ಅಂಥ ನ್ಯಾಯಾಲಯಗಳಲ್ಲಿ ಕನಿಷ್ಠ ಪಕ್ಷ ಏಳು ವರ್ಷಗಳವರೆಗೆ ನ್ಯಾಯವಾದಿಯಾಗಿದ್ದ ಹೊರತು ; ಅಥವಾ

(ಗ) ಭಾರತದ ಮುಖ್ಯ ನ್ಯಾಯಾಧೀಶನ ಸಹಮತಿಯೊಂದಿಗೆ, ಕೇಂದ್ರ ಸರ್ಕಾರವು ನಿಯಮಿಸುವಂಥ ಇತರ ಅರ್ಹತೆಗಳನ್ನು ಹೊಂದಿರುವ ಹೊರತು

—ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕುದಲ್ಲ.

(4) ನ್ಯಾಯಾಧೀಶರನ್ನಾಗಿ ನೇಮಕ ಮಾಡಲು ವ್ಯಕ್ತಿಗಳನ್ನು ಆಯ್ಕೆ ಮಾಡುವಲ್ಲಿ,—

(ಕ) ವಿವಾಹದ ಸಂಪ್ರದಾಯವನ್ನು ಸಂರಕ್ಷಿಸುವ ಮತ್ತು ಪರಿರಕ್ಷಿಸುವ ಅಗತ್ಯತೆಗೆ ಮತ್ತು ಮಕ್ಕಳ ಕಲ್ಯಾಣವನ್ನು ಅಭಿವೃದ್ಧಿಪಡಿಸುವುದಕ್ಕೆ ಅರ್ಪಿಸಿಕೊಂಡ ಮತ್ತು ಸಂಧಾನ ಮತ್ತು ಸಲಹೆಯ ಮೂಲಕ ವಿವಾದಗಳನ್ನು ಇತ್ಯರ್ಥಗೊಳಿಸುವುದನ್ನು ತಮ್ಮ ಅನುಭವ ಮತ್ತು ಪರಿಣತಿಯ ಕಾರಣದಿಂದಾಗಿ ಅಭಿವೃದ್ಧಿಪಡಿಸಲು ಅರ್ಹರಾಗಿರುವಂಥ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಪ್ರತಿಯೊಂದು ಪ್ರಯತ್ನವನ್ನು ಮಾಡತಕ್ಕುದು ; ಮತ್ತು

(ಖ) ಮಹಿಳೆಯರಿಗೆ ಪ್ರಾಶಸ್ತ್ಯವನ್ನು ಕೊಡತಕ್ಕುದು.

(5) ಅರವತ್ತೆರಡು ವರ್ಷ ವಯಸ್ಸನ್ನು ತಲುಪಿದ ತರುವಾಯ, ಯಾವನೇ ವ್ಯಕ್ತಿಯು ಕುಟುಂಬ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳತಕ್ಕುದಲ್ಲ ಅಥವಾ ಆ ಪದಧಾರಣ ಮಾಡತಕ್ಕುದಲ್ಲ.

(6) ನ್ಯಾಯಾಧೀಶನಿಗೆ ಸಂದಾಯ ಮಾಡಬೇಕಾದ ವೇತನ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥವು ಆಗಿರತಕ್ಕುದು.

**5.** **ಸಮಾಜ ಕಲ್ಯಾಣ ಏಜನ್ಸಿಗಳು, ಇತ್ಯಾದಿಗಳ ಸಹವರ್ತನೆ.**—ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಕುಟುಂಬ ನ್ಯಾಯಾಲಯದೊಂದಿಗೆ,—

(ಕ) ಸಮಾಜ ಕಲ್ಯಾಣದಲ್ಲಿ ತೊಡಗಿದ ಸಂಸ್ಥೆಗಳು ಅಥವಾ ಸಂಘಟನೆಗಳು ಅಥವಾ ಅವುಗಳ ಪ್ರತಿನಿಧಿಗಳ;

(ಖ) ವೃತ್ತಿಯಿಂದ ಕುಟುಂಬ ಕಲ್ಯಾಣದ ಅಭಿವೃದ್ಧಿಯಲ್ಲಿ ತೊಡಗಿದ ವ್ಯಕ್ತಿಗಳ;

(ಗ) ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳ; ಮತ್ತು

(ಘ) ಕುಟುಂಬ ನ್ಯಾಯಾಲಯದೊಂದಿಗೆ ಯಾವ ವ್ಯಕ್ತಿಯ ಸಹವರ್ತನೆಯು ಈ ಅಧಿನಿಯಮದ ಉದ್ದೇಶಗಳಿಗನುಸಾರವಾಗಿ ಅದರ ಅಧಿಕಾರ ವ್ಯಾಪ್ತಿಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಚಲಾಯಿಸಲು ಸಮರ್ಥಗೊಳಿಸುವುದೋ ಆ ಯಾವನೇ ಇತರ ವ್ಯಕ್ತಿಯ

—ಸಹವರ್ತನೆಗಾಗಿ, ನಿಯಮಗಳ ಮೂಲಕ ಉಪಬಂಧಿಸಬಹುದು.

**6 (1)** **ಕುಟುಂಬ ನ್ಯಾಯಾಲಯಗಳ ಸಲಹೆಗಾರರು, ಅಧಿಕಾರಿಗಳು ಮತ್ತು ಇತರ ನಿಯೋಜಿತರು.**—ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಕುಟುಂಬ ನ್ಯಾಯಾಲಯವು ಅದರ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ನೆರವು ನೀಡುವುದಕ್ಕಾಗಿ ಅಗತ್ಯವಿರುವ ಸಲಹೆಗಾರರು, ಅಧಿಕಾರಿಗಳು ಮತ್ತು ಇತರ ನಿಯೋಜಿತರ ಸಂಖ್ಯೆ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕುದು ಮತ್ತು ತಾನು ಸೂಕ್ತವೆಂದು ಯೋಚಿಸುವಂಥ ಸಲಹೆಗಾರರು, ಅಧಿಕಾರಿಗಳು ಮತ್ತು ಇತರ ನಿಯೋಜಿತರನ್ನು ಕುಟುಂಬ ನ್ಯಾಯಾಲಯಕ್ಕೆ ಒದಗಿಸತಕ್ಕುದು.

(2) (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಸಲಹೆಗಾರರ ಸಹವರ್ತನೆಯ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅಧಿಕಾರಿಗಳು ಮತ್ತು ಇತರ ನಿಯೋಜಿತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂಥವು ಆಗಿರತಕ್ಕುದು.

## ಅಧ್ಯಾಯ—III

### ಅಧಿಕಾರ ವ್ಯಾಪ್ತಿ

**7. ಅಧಿಕಾರ ವ್ಯಾಪ್ತಿ.**—(1) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು ಕುಟುಂಬ ನ್ಯಾಯಾಲಯವು,-

(ಕ) ವಿವರಣೆಯಲ್ಲಿ ಉಲ್ಲೇಖಿಸಲಾದ ಸ್ವರೂಪದ ದಾವೆಗಳು ಮತ್ತು ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ಜಿಲ್ಲಾ ನ್ಯಾಯಾಲಯು ಅಥವಾ ಯಾವುದೇ ಅಧೀನ ಸಿವಿಲ್ ನ್ಯಾಯಾಲಯವು ಚಲಾಯಿಸಬಹುದಾದ ಎಲ್ಲ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದು ಮತ್ತು ಚಲಾಯಿಸತಕ್ಕದು; ಮತ್ತು

(ಖ) ಅಂಥ ಕಾನೂನಿನ ಮೇರೆಗೆ ಅಂಥ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವ ಉದ್ದೇಶಗಳಿಗಾಗಿ, ಅದನ್ನು ಯಾವ ಪ್ರದೇಶಕ್ಕೆ ಕುಟುಂಬ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ವಿಸ್ತರಿಸುತ್ತದೆಯೋ ಆ ಪ್ರದೇಶಕ್ಕಾಗಿ ಜಿಲ್ಲಾ ನ್ಯಾಯಾಲಯು ಅಥವಾ ಸಂದರ್ಭಾನುಸಾರ, ಅಂಥ ಅಧೀನ ಸಿವಿಲ್ ನ್ಯಾಯಾಲಯವೆಂಬುದಾಗಿ ಭಾವಿಸತಕ್ಕದು.

ವಿವರಣೆ:—ಈ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ದಾವೆಗಳು ಮತ್ತು ವ್ಯವಹರಣೆಗಳು ಈ ಕೆಳಕಂಡ ಸ್ವರೂಪದ ದಾವೆಗಳು ಮತ್ತು ವ್ಯವಹರಣೆಗಳಾಗಿರುತ್ತವೆ, ಎಂದರೆ:—

(ಕ) ವಿವಾಹದ ಅಕೃತತೆಯ (ವಿವಾಹವನ್ನು ಅಕೃತ ಮತ್ತು ಶೂನ್ಯವೆಂದು ಘೋಷಿಸುವುದು ಅಥವಾ ಸಂದರ್ಭಾನುಸಾರ ವಿವಾಹವನ್ನು ಅಕೃತಗೊಳಿಸುವುದು) ಅಥವಾ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿ ಅಥವಾ ನ್ಯಾಯಿಕ ಪ್ರತ್ಯೇಕೀಕರಣದ ಅಥವಾ ವಿವಾಹ ವಿಘಟನೆಯ ಡಿಕ್ರಿಗಾಗಿ ವಿವಾಹದ ಪಕ್ಷಕಾರರ ನಡುವಣ ದಾವೆ ಅಥವಾ ವ್ಯವಹರಣೆ ;

(ಖ) ಯಾವನೇ ವ್ಯಕ್ತಿಯ ವಿವಾಹದ ಸಿಂಧುತ್ವ ಅಥವಾ ವೈವಾಹಿಕ ಸ್ಥಾನಮಾನ ಘೋಷಣೆಗಾಗಿನ ದಾವೆ ಅಥವಾ ವ್ಯವಹರಣೆ;

(ಗ) ವಿವಾಹದ ಪಕ್ಷಕಾರರ ಅಥವಾ ಅವರಲ್ಲೊಬ್ಬರ ಸ್ವತ್ತಿಗೆ ಸಂಬಂಧಿಸಿದಂತೆ ಅವರ ನಡುವಣ ದಾವೆ ಅಥವಾ ವ್ಯವಹರಣೆ;

(ಘ) ವೈವಾಹಿಕ ಸಂಬಂಧದಿಂದ ಉದ್ಭವಿಸುವ ಸನ್ನಿವೇಶಗಳಲ್ಲಿ ಆದೇಶ ಅಥವಾ ನಿರ್ಬಂಧಕಾಜ್ಞೆಗಾಗಿ ದಾವೆ ಅಥವಾ ವ್ಯವಹರಣೆ;

(ಙ) ಯಾವನೇ ವ್ಯಕ್ತಿಯ ಔರಸತ್ವದ ಬಗ್ಗೆ ಘೋಷಣೆಗಾಗಿ ದಾವೆ ಅಥವಾ ವ್ಯವಹರಣೆ ;

(ಚ) ಜೀವನಾಂಶಕ್ಕಾಗಿ ದಾವೆ ಅಥವಾ ವ್ಯವಹರಣೆ ;

(ಛ) ಯಾವನೇ ಅಪ್ರಾಪ್ತ ವಯಸ್ಕನ ಶರೀರದ ಪಾಲಕತ್ವಕ್ಕೆ ಅಥವಾ ಅವನ ಅಭಿರಕ್ಷೆ ಅಥವಾ ಅವನೊಂದಿಗೆ ಸಂಪರ್ಕ ಹೊಂದುವುದಕ್ಕೆ ಸಂಬಂಧಿಸಿದ ದಾವೆ ಅಥವಾ ವ್ಯವಹರಣೆ;

(2) ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಕುಟುಂಬ ನ್ಯಾಯಾಲಯವು,-

(ಕ) ದಂಡ ಪ್ರಕ್ರಿಯಾ ಸಂಹಿತೆ, 1973ರ ಅಧ್ಯಾಯ IXರ ಮೇರೆಗೆ (ಹೆಂಡತಿ, ಮಕ್ಕಳು ಮತ್ತು ತಂದೆ ತಾಯಿಗಳ ಜೀವನಾಂಶಕ್ಕಾಗಿ ಆದೇಶಿಸುವುದಕ್ಕೆ ಸಂಬಂಧಿಸಿ) ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನು ಚಲಾಯಿಸಬಹುದಾದ ಅಧಿಕಾರ ವ್ಯಾಪ್ತಿ; ಮತ್ತು

(ಖ) ಇತರ ಯಾವುದೇ ಅಧಿನಿಯಮಿತಿಯ ಮೂಲಕ ಅದಕ್ಕೆ ಪ್ರದಾನ ಮಾಡಬಹುದಾದಂಥ ಅಧಿಕಾರ ವ್ಯಾಪ್ತಿಯನ್ನು ಸಹ ಹೊಂದಿರತಕ್ಕದು ಮತ್ತು ಚಲಾಯಿಸತಕ್ಕದು.

**8. ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸುವುದು ಮತ್ತು ಇತ್ಯರ್ಥದಲ್ಲಿರುವ ವ್ಯವಹರಣೆಗಳು.**— ಯಾವುದೇ ಪ್ರದೇಶಕ್ಕಾಗಿ ಕುಟುಂಬ ನ್ಯಾಯಾಲಯವನ್ನು ಸ್ಥಾಪಿಸಲಾಗಿರುವಲ್ಲಿ, —

(ಕ) 7ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಜಿಲ್ಲಾ ನ್ಯಾಯಾಲಯ ಅಥವಾ ಯಾವುದೇ ಅಧೀನ ಸಿವಿಲ್‌ನ್ಯಾಯಾಲಯವು ಅಂಥ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಆ ಉಪಪ್ರಕರಣದ ವಿವರಣೆಯಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ದಾವೆ ಅಥವಾ ವ್ಯವಹರಣೆಯ ಸಂಬಂಧದಲ್ಲಿ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದಲ್ಲ ಅಥವಾ ಚಲಾಯಿಸತಕ್ಕದಲ್ಲ;

(ಖ) ದಂಡ ಪ್ರಕ್ರಿಯಾ ಸಂಹಿತೆ, 1973ರ IXನೆಯ ಅಧ್ಯಾಯದ ಮೇರೆಗೆ ಅಂಥ ಪ್ರದೇಶಕ್ಕೆ ಸಂಬಂಧಿಸಿದಂತೆ ಯಾವ ಮ್ಯಾಜಿಸ್ಟ್ರೇಟನು ಯಾವುದೇ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳನ್ನು ಹೊಂದಿರತಕ್ಕದಲ್ಲ ಅಥವಾ ಚಲಾಯಿಸತಕ್ಕದಲ್ಲ;

(ಗ) 7ನೆಯ ಪ್ರಕರಣದ (1)ನೆಯ ಉಪಪ್ರಕರಣದ ವಿವರಣೆಯಲ್ಲಿ ಉಲ್ಲೇಖಿಸಲಾದ ಸ್ವರೂಪದ ಪ್ರತಿಯೊಂದು ದಾವೆ ಮತ್ತು ವ್ಯವಹರಣೆಯು ಮತ್ತು ದಂಡಪ್ರಕ್ರಿಯಾ ಸಂಹಿತೆ, 1973ರ IXನೆಯ ಅಧ್ಯಾಯದ ಮೇರೆಗಿನ ಪ್ರತಿಯೊಂದು ವ್ಯವಹರಣೆಯು,-

(i) 7ನೇ ಪ್ರಕರಣದ (1)ನೆಯ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಅಥವಾ ಸಂದರ್ಭಾನುಸಾರ, ದಂಡಪ್ರಕ್ರಿಯಾ ಸಂಹಿತೆ, 1973ರ ಮೇರೆಗೆ ಯಾವನೇ ಮ್ಯಾಜಿಸ್ಟ್ರೇಟನ ಮುಂದೆ ಕುಟುಂಬ ನ್ಯಾಯಾಲಯದ ಸ್ಥಾಪನೆಗೆ ನಿಕಟಪೂರ್ವದಲ್ಲಿ ಇತ್ಯರ್ಥದಲ್ಲಿರುವಂಥ; ಮತ್ತು

(ii) ಅಂಥ ದಾವೆ ಅಥವಾ ವ್ಯವಹರಣೆಯನ್ನು ಹೂಡಿದ್ದ ಅಥವಾ ಕೈಗೊಂಡಂಥ ದಿನಾಂಕಕ್ಕೆ ಮುಂಚೆ ಈ ಅಧಿನಿಯಮವು ಜಾರಿಗೆ ಬಂದಿದ್ದರೆ ಮತ್ತು ಅಂಥ ಕುಟುಂಬ ನ್ಯಾಯಾಲಯವನ್ನು ಸ್ಥಾಪಿಸಲಾಗಿದ್ದಿದ್ದರೆ ಅಂಥ ಕುಟುಂಬ ನ್ಯಾಯಾಲಯದ ಮುಂದೆ ಅಥವಾ ಅದು ಹೂಡಬೇಕಾದ ಅಥವಾ ಕೈಗೊಳ್ಳಲು ಅಗತ್ಯವಾಗಿದ್ದಿರಬಹುದಾದಂಥ, 7ನೆಯ ಪ್ರಕರಣದ (1)ನೇ ಉಪ-ಪ್ರಕರಣದ ವಿವರಣೆಯಲ್ಲಿ ಉಲ್ಲೇಖಿಸಿದ ಸ್ವರೂಪದ ಪ್ರತಿಯೊಂದು ದಾವೆ ಅಥವಾ ವ್ಯವಹರಣೆ ಮತ್ತು ದಂಡಪ್ರಕ್ರಿಯಾ ಸಂಹಿತೆಯ IXನೇ ಅಧ್ಯಾಯದ ಮೇರೆಗಿನ ಪ್ರತಿಯೊಂದು ವ್ಯವಹರಣೆಯು ಅಂಥ ಕುಟುಂಬ ನ್ಯಾಯಾಲಯಕ್ಕೆ, ಅದು ಸ್ಥಾಪಿತವಾದಂಥ ದಿನಾಂಕದಂದು ವರ್ಗಾಯಿತವಾಗತಕ್ಕದು.

## ಅಧ್ಯಾಯ-IV

### ಕಾರ್ಯವಿಧಾನ

**9. ಇತ್ಯರ್ಥಕ್ಕಾಗಿ ಪ್ರಯತ್ನಗಳನ್ನು ಮಾಡಲು ಕುಟುಂಬ ನ್ಯಾಯಾಲಯದ ಕರ್ತವ್ಯ.**— (1) ಪ್ರತಿಯೊಂದು ದಾವೆ ಅಥವಾ ವ್ಯವಹರಣೆಯಲ್ಲಿ ಪ್ರಕರಣದ ಸ್ವರೂಪ ಮತ್ತು ಸನ್ನಿವೇಶಗಳಿಗೆ ಸುಸಂಗತವಾಗಿ ಹಾಗೆ ಮಾಡಲು ಸಾಧ್ಯವಿರುವಲ್ಲಿ, ಕುಟುಂಬ ನ್ಯಾಯಾಲಯವು ಮೊದಲು ದಾವೆ ಅಥವಾ ವ್ಯವಹರಣೆಯ ವಸ್ತು ವಿಷಯಕ್ಕೆ ಸಂಬಂಧಪಟ್ಟಂತೆ ಇತ್ಯರ್ಥಕ್ಕೆ ಬರಲು ಪಕ್ಷಕಾರರಿಗೆ ನೆರವು ನೀಡಲು ಹಾಗೂ ಮನವೊಲಿಸಲು ಪ್ರಯತ್ನ ಮಾಡತಕ್ಕದು ಮತ್ತು ಈ ಉದ್ದೇಶಕ್ಕಾಗಿ, ಉಚ್ಚ ನ್ಯಾಯಾಲಯವು ರಚಿಸಿದ ಯಾವುದೇ ನಿಯಮಗಳಿಗೆ ಒಳಪಟ್ಟು, ಅದು ಸೂಕ್ತವೆಂದು ಭಾವಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಬಹುದು.

(2) ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ, ಯಾವುದೇ ಹಂತದಲ್ಲಿ, ಪಕ್ಷಕಾರರ ನಡುವೆ ಇತ್ಯರ್ಥದ ಯುಕ್ತಸಾಧ್ಯತೆ ಇದೆಯೆಂದು ಕುಟುಂಬ ನ್ಯಾಯಾಲಯಕ್ಕೆ ಕಂಡುಬಂದರೆ, ಆ ಕುಟುಂಬ ನ್ಯಾಯಾಲಯವು ಅಂಥ ಇತ್ಯರ್ಥಕ್ಕೆ ಬರುವುದಕ್ಕೆ ಪ್ರಯತ್ನಗಳನ್ನು ಸಾಧ್ಯವಾಗಿಸಲು ಹಾಗೆ ತಾನು ಸೂಕ್ತವೆಂದು ಯೋಚಿಸುವಂಥ ಅವಧಿಯವರೆಗೆ ಆ ವ್ಯವಹರಣೆಗಳನ್ನು ಮುಂದೂಡಬಹುದು.

(3) (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವು, ವ್ಯವಹರಣೆಗಳನ್ನು ಮುಂದೂಡಲು ಕುಟುಂಬ ನ್ಯಾಯಾಲಯದ ಇತರ ಯಾವುದೇ ಅಧಿಕಾರಕ್ಕೆ ಜೊತೆಯಾಗಿರತಕ್ಕದು ಮತ್ತು ಅದನ್ನು ಅಲ್ಪೀಕರಿಸಿ ಅಲ್ಲ.

**10. ಪ್ರಕ್ರಿಯೆ ಸಾಮಾನ್ಯವಾಗಿ.**— ಈ ಅಧಿನಿಯಮದ ಇತರ ಉಪಬಂಧಗಳು ಹಾಗೂ ನಿಯಮಗಳಿಗೊಳಪಟ್ಟು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳು ಕುಟುಂಬ ನ್ಯಾಯಾಲಯದ ಮುಂದಿರುವ (ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರ IXನೇ ಅಧ್ಯಾಯದ ಮೇರೆಗಿನ ವ್ಯವಹರಣೆಯನ್ನು ಹೊರತುಪಡಿಸಿ) ದಾವೆಗಳು ಮತ್ತು ವ್ಯವಹರಣೆಗಳಿಗೆ ಅನ್ವಯವಾಗತಕ್ಕದು ಮತ್ತು ಆ ಸಂಹಿತೆಯ ಸದರಿ ಉಪಬಂಧಗಳ ಉದ್ದೇಶಗಳಿಗಾಗಿ ಕುಟುಂಬ ನ್ಯಾಯಾಲಯವನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದು ಹಾಗೂ ಅದು ಅಂಥ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದು.

(2) ಈ ಅಧಿನಿಯಮದ ಇತರ ಉಪಬಂಧಗಳು ಮತ್ತು ನಿಯಮಗಳಿಗೊಳಪಟ್ಟು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು, ಕುಟುಂಬ ನ್ಯಾಯಾಲಯದ ಮುಂದಿರುವ, ಆ ಸಂಹಿತೆಯ IXನೇ ಅಧ್ಯಾಯದ ಮೇರೆಗಿನ ವ್ಯವಹರಣೆಗಳಿಗೆ ಅನ್ವಯವಾಗತಕ್ಕದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿರುವುದಾವುದೂ, ದಾವೆಯ ಅಥವಾ ವ್ಯವಹರಣೆಗಳ ವಸ್ತು ವಿಷಯಕ್ಕೆ ಸಂಬಂಧಪಟ್ಟಂತೆ ಇತ್ಯರ್ಥಕ್ಕೆ ಬರುವ ಅಥವಾ ಒಬ್ಬ ಪಕ್ಷಕಾರನು ಆಪಾದಿಸಿದ ಹಾಗೂ ಮತ್ತೊಬ್ಬನು ಅಲ್ಲಗಳೆದ ಸಂಗತಿಗಳ ಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ, ತನ್ನದೇ ಆದ ಪ್ರಕ್ರಿಯೆ ವಿಧಿಸುವುದನ್ನು ಅಡ್ಡಿಪಡಿಸತಕ್ಕದಲ್ಲ.

**11. ವ್ಯವಹರಣೆಗಳನ್ನು ರಹಸ್ಯವಾಗಿ ನಡೆಸುವುದು.**— ಈ ಅಧಿನಿಯಮವು ಅನ್ವಯವಾಗುವಂಥ ಪ್ರತಿಯೊಂದು ದಾವೆ ಅಥವಾ ವ್ಯವಹರಣೆಗಳಲ್ಲಿ ಆ ಕುಟುಂಬ ನ್ಯಾಯಾಲಯವು ಹಾಗೆ ಇಚ್ಛಿಸಿದರೆ, ವ್ಯವಹರಣೆಗಳನ್ನು ರಹಸ್ಯವಾಗಿ ನಡೆಸಬಹುದು ಮತ್ತು ಎರಡರಲ್ಲಿ ಯಾರೇ ಪಕ್ಷಕಾರರು ಹಾಗೆ ಇಚ್ಛಿಸಿದರೆ, ಹಾಗೆ ನಡೆಸತಕ್ಕದು.

**12. ವೈದ್ಯಕೀಯ ಹಾಗೂ ಕಲ್ಯಾಣ ಪರಿಣತರ ನೆರವು.**— ಪ್ರತಿಯೊಂದು ದಾವೆ ಅಥವಾ ವ್ಯವಹರಣೆಗಳಲ್ಲಿ ಈ ಅಧಿನಿಯಮದ ಮೂಲಕ ವಿಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಕುಟುಂಬ ನ್ಯಾಯಾಲಯಕ್ಕೆ ನೆರವು ನೀಡುವ ಉದ್ದೇಶಗಳಿಗಾಗಿ, ಆ ನ್ಯಾಯಾಲಯವು ಸೂಕ್ತವೆಂದು ಯೋಚಿಸುವಂಥ ವೈದ್ಯಕೀಯ ಪರಿಣತಿ ಅಥವಾ ಕುಟುಂಬದ ಕಲ್ಯಾಣವನ್ನು ವೃದ್ಧಿಗೊಳಿಸುವಲ್ಲಿ ವೃತ್ತೀಯವಾಗಿ ತೊಡಗಿರುವಂಥ ವ್ಯಕ್ತಿಯನ್ನು ಒಳಗೊಂಡು ಅವನು ಪಕ್ಷಕಾರರಿಗೆ ಸಂಬಂಧಿಯಾಗಿರಲಿ ಅಥವಾ ಇಲ್ಲದಿರಲಿ ಅಂಥ ವ್ಯಕ್ತಿಯ (ಲಭ್ಯವಿರುವಲ್ಲಿ ಮಹಿಳೆಗೆ ಪ್ರಾಶಸ್ತ್ಯ ಕೊಟ್ಟು) ಸೇವೆಗಳನ್ನು ಪಡೆಯುವುದು ಕುಟುಂಬ ನ್ಯಾಯಾಲಯಕ್ಕೆ ಯುಕ್ತವಾಗಿರತಕ್ಕದು.

**13. ಕಾನೂನು ಸಮ್ಮತ ಪ್ರಾತಿನಿಧ್ಯಕ್ಕೆ ಹಕ್ಕು.**— ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕುಟುಂಬ ನ್ಯಾಯಾಲಯದ ಮುಂದೆ ಇರುವ ದಾವೆ ಅಥವಾ ವ್ಯವಹರಣೆಯ ಯಾವನೇ ಪಕ್ಷಕಾರನು ಹಕ್ಕಿನಿಂದ, ನ್ಯಾಯವಾದಿಯ ಮೂಲಕ ಪ್ರತಿನಿಧಿತನಾಗಲು ಹಕ್ಕುಳ್ಳವನಾಗಿರತಕ್ಕದಲ್ಲ :

ಪರಂತು, ನ್ಯಾಯದ ಹಿತದೃಷ್ಟಿಯಿಂದ ಕುಟುಂಬ ನ್ಯಾಯಾಲಯವು ಅವಶ್ಯವೆಂದು ಪರ್ಯಾಲೋಚಿಸಿದರೆ, ನ್ಯಾಯಾಲಯದ ಮಿತ್ರನ ಹಾಗೆ ಕಾನೂನು ಪರಿಣತನ ನೆರವನ್ನು ಅದು ಕೋರಬಹುದು.

**14. ಭಾರತ ಸಾಕ್ಷ್ಯ ಅಧಿನಿಯಮ, 1872ರ ಅನ್ವಯ.**— ಕುಟುಂಬ ನ್ಯಾಯಾಲಯವು, ಭಾರತ ಸಾಕ್ಷ್ಯ ಅಧಿನಿಯಮ, 1872ರ ಮೇರೆಗೆ ಅನ್ಯಥಾ ಸುಸಂಗತ ಅಥವಾ ಅಂಗೀಕಾರಾರ್ಹವಾಗಿರಲಿ ಅಥವಾ ಇಲ್ಲದಿರಲಿ, ವಿವಾದದೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸಲು ಅದರ ಅಭಿಪ್ರಾಯದಲ್ಲಿ ನೆರವಾಗಬಹುದಾದ ಯಾವುದೇ ವರದಿ, ವಿವರಣಾ ಪತ್ರ, ದಸ್ತಾವೇಜುಗಳು, ಮಾಹಿತಿ ಅಥವಾ ವಿಷಯವನ್ನು ಸಾಕ್ಷ್ಯವಾಗಿ ಸ್ವೀಕರಿಸಬಹುದು.

**15. ಮೌಖಿಕ ಸಾಕ್ಷ್ಯದ ದಾಖಲೆ.**— ಕುಟುಂಬ ನ್ಯಾಯಾಲಯದ ಮುಂದಿರುವ ದಾವೆಗಳು ಅಥವಾ ವ್ಯವಹರಣೆಗಳಲ್ಲಿ, ಸಾಕ್ಷಿದಾರರ ಸಾಕ್ಷ್ಯವನ್ನು ದೀರ್ಘವಾಗಿ ದಾಖಲು ಮಾಡುವುದು ಅವಶ್ಯವಾಗಿರತಕ್ಕದಲ್ಲ, ಆದರೆ ನ್ಯಾಯಾಧೀಶನು ಪ್ರತಿಯೊಬ್ಬ ಸಾಕ್ಷಿದಾರನ ವಿಚಾರಣೆಯು ನಡೆಯುತ್ತಿರುವಾಗ ಸಾಕ್ಷಿದಾರನು ಕೊಟ್ಟ ಸಾಕ್ಷ್ಯದ ಸಾರಾಂಶದ ಟಿಪ್ಪಣಿಯನ್ನು ದಾಖಲು ಮಾಡತಕ್ಕದು ಅಥವಾ ದಾಖಲು ಮಾಡುವಂತೆ ಮಾಡತಕ್ಕದು ಮತ್ತು ಅಂಥ ಟಿಪ್ಪಣಿಗೆ ಆ ಸಾಕ್ಷಿದಾರ ಮತ್ತು ನ್ಯಾಯಾಧೀಶನು ರುಜು ಮಾಡತಕ್ಕದು ಮತ್ತು ಅದು ದಾಖಲೆಯ ಭಾಗವಾಗಿರತಕ್ಕದು.

**16. ಶಪಥ ಪತ್ರದ ಮೂಲಕ ಔಪಚಾರಿಕ ಸ್ವರೂಪದ ಸಾಕ್ಷ್ಯ.**—ಯಾವನೇ ವ್ಯಕ್ತಿಯ ಸಾಕ್ಷ್ಯವು, ಅಂಥ ಸಾಕ್ಷ್ಯವು ಔಪಚಾರಿಕ ಸ್ವರೂಪದ್ದಾಗಿರುವಲ್ಲಿ, ಶಪಥ ಪತ್ರದ ಮೂಲಕ ಕೊಡಬಹುದು ಮತ್ತು ಎಲ್ಲಾ ನ್ಯಾಯಸಮ್ಮತ ಅಪವಾದಗಳಿಗೆ ಒಳಪಟ್ಟು ಕುಟುಂಬ ನ್ಯಾಯಾಲಯದ ಮುಂದಿನ ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ ಅದನ್ನು ಸಾಕ್ಷ್ಯವಾಗಿ ಓದಬಹುದು.

(2) ಕುಟುಂಬ ನ್ಯಾಯಾಲಯವು ತಾನು ಸೂಕ್ತವೆಂದು ಯೋಚಿಸಿದರೆ ಯಾವನೇ ಅಂಥ ವ್ಯಕ್ತಿಯನ್ನು ಸಮನು ಮಾಡಬಹುದು ಮತ್ತು ಅವನ ಶಪಥ ಪತ್ರದಲ್ಲಿ ಅಡಕವಾಗಿರುವ ಸಂಗತಿಗಳ ಬಗ್ಗೆ ಪರೀಕ್ಷಿಸಬಹುದು ಮತ್ತು ಆ ದಾವೆ ಅಥವಾ ವ್ಯವಹರಣೆಯ ಯಾವನೇ ಪಕ್ಷಕಾರನ ಅರ್ಜಿಯ ಮೇಲೆ ಅವನನ್ನು ಹಾಗೆ ಸಮನು ಮಾಡತಕ್ಕದ್ದು ಮತ್ತು ಪರೀಕ್ಷಿಸತಕ್ಕದ್ದು.

**17. ತೀರ್ಪು.**—ಕುಟುಂಬ ನ್ಯಾಯಾಲಯದ ತೀರ್ಪು, ಪ್ರಕರಣದ ಸಂಕ್ಷಿಪ್ತ ವಿವರಣೆ, ನಿರ್ಧರಿಸಬೇಕಾದ ಅಂಶ, ಅದರ ಮೇಲಿನ ತೀರ್ಮಾನ ಮತ್ತು ಅಂಥ ತೀರ್ಮಾನಕ್ಕೆ ಕಾರಣಗಳನ್ನು ಒಳಗೊಂಡಿರತಕ್ಕದ್ದು.

**18. ಡಿಕ್ರಿಗಳ ಮತ್ತು ಆದೇಶಗಳ ಜಾರಿ.**—(1) ಕುಟುಂಬ ನ್ಯಾಯಾಲಯವು ಮಾಡಿದ ಡಿಕ್ರಿ ಅಥವಾ ಆದೇಶವು (ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ IXನೇ ಅಧ್ಯಾಯದ ಮೇರೆಗಿನ ಆದೇಶವನ್ನು ಹೊರತುಪಡಿಸಿ) ಸಿವಿಲ್ ನ್ಯಾಯಾಲಯದ ಡಿಕ್ರಿ ಅಥವಾ ಆದೇಶದಂತೆ ಅದೇ ಬಲ ಮತ್ತು ಪರಿಣಾಮವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಡಿಕ್ರಿಗಳ ಮತ್ತು ಆದೇಶಗಳ ಜಾರಿಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ನಿಯಮಿಸಲಾದ ರೀತಿಯಲ್ಲಿಯೇ ಜಾರಿಗೊಳಿಸತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973ರ IXನೇ ಅಧ್ಯಾಯದ ಮೇರೆಗೆ ಕುಟುಂಬ ನ್ಯಾಯಾಲಯವು ಮಾಡಿದ ಆದೇಶವನ್ನು ಆ ಸಂಹಿತೆಯ ಮೂಲಕ ಅಂಥ ಆದೇಶದ ಜಾರಿಗಾಗಿ ನಿಯಮಿಸಿದ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು.

(3) ಡಿಕ್ರಿ ಅಥವಾ ಆದೇಶವನ್ನು, ಅದನ್ನು ಮಾಡಿದ ಕುಟುಂಬ ನ್ಯಾಯಾಲಯವಾಗಲಿ ಅಥವಾ ಜಾರಿಗಾಗಿ ಅದನ್ನು ಕಳುಹಿಸಲಾದಂಥ ಇತರ ಕುಟುಂಬ ನ್ಯಾಯಾಲಯ ಅಥವಾ ಸಾಮಾನ್ಯ ಸಿವಿಲ್ ನ್ಯಾಯಾಲಯವಾಗಲಿ ಜಾರಿಗೊಳಿಸಬಹುದು.

## ಅಧ್ಯಾಯ-V

### ಅಪೀಲುಗಳು

**19. ಅಪೀಲು.**—(1) (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕುಟುಂಬ ನ್ಯಾಯಾಲಯದ ಪ್ರತಿಯೊಂದು ತೀರ್ಪು ಅಥವಾ ವಾದಕಾಲೀನ ಆದೇಶವಲ್ಲದ ಆದೇಶದ ಮೇಲೆ, ಸಂಗತಿಗಳ ಮೇಲೂ ಮತ್ತು ಕಾನೂನಿನ ಮೇಲೂ ಉಚ್ಚ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದು.

(2) ಪಕ್ಷಕಾರರ ಸಮ್ಮತಿಯೊಂದಿಗೆ ಕುಟುಂಬ ನ್ಯಾಯಾಲಯವು ಮಾಡಿದ ಡಿಕ್ರಿ ಅಥವಾ ಆದೇಶದ ಮೇಲೆ ಯಾವುದೇ ಅಪೀಲು ಇರತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ಕುಟುಂಬ ನ್ಯಾಯಾಲಯದ ತೀರ್ಪು ಅಥವಾ ಆದೇಶದ ದಿನಾಂಕದಿಂದ 30 ದಿವಸಗಳ ಅವಧಿಯೊಳಗೆ ಸಲ್ಲಿಸತಕ್ಕದ್ದು.

(4) ಮೇಲೆ ಹೇಳಿದಂತೆ ಹೊರತು, ಒಂದು ಕುಟುಂಬ ನ್ಯಾಯಾಲಯದ ಯಾವುದೇ ತೀರ್ಪು, ಆದೇಶ ಅಥವಾ ಡಿಕ್ರಿಯ ಮೇಲೆ ಯಾವುದೇ ನ್ಯಾಯಾಲಯಕ್ಕೆ ಯಾವುದೇ ಅಪೀಲು ಅಥವಾ ಪುನರೀಕ್ಷಣೆ ಇರತಕ್ಕದ್ದಲ್ಲ.

(5) (1)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲನ್ನು ಇಬ್ಬರು ಅಥವಾ ಹೆಚ್ಚು ನ್ಯಾಯಾಧೀಶರನ್ನೊಳಗೊಂಡ ಒಂದು ನ್ಯಾಯಪೀಠವು ಸುನಾವಣೆ ಮಾಡತಕ್ಕದ್ದು.

## ಅಧ್ಯಾಯ-VI

### ಸಂಕೀರ್ಣ

**20. ಈ ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರತಕ್ಕದ್ದು.**—ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಕಾನೂನಿನಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾದುದು ಏನೇ ಇದ್ದಾಗ್ಯೂ, ಪರಿಣಾಮವನ್ನು ಹೊಂದಿರತಕ್ಕದ್ದು.

**21. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ.**—(1) ಉಚ್ಚ ನ್ಯಾಯಾಲಯವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅದು ಅಗತ್ಯವೆಂದು ಭಾವಿಸಬಹುದಾದಂತಹ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಲಾದ ಅಧಿಕಾರದ ಸಾಮಾನ್ಯತ್ವಕ್ಕೆ ಬಾಧಕವಾಗದಂತೆ ಅಂತಹ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:—

(ಕ) ಕುಟುಂಬ ನ್ಯಾಯಾಲಯಗಳ ಸಾಮಾನ್ಯ ಕೆಲಸದ ವೇಳೆಗಳು ಮತ್ತು ರಜೆ ದಿನಗಳಂದು ಮತ್ತು ಸಾಮಾನ್ಯ ಕೆಲಸದ ವೇಳೆಗಳನ್ನು ಬಿಟ್ಟು ಉಪವೇಶನಗಳನ್ನು ನಡೆಸುವುದು;

(ಖ) ಅವುಗಳ ಸಾಮಾನ್ಯ ಉಪವೇಶನಗಳ ಸ್ಥಳಗಳನ್ನು ಬಿಟ್ಟು ಇತರ ಸ್ಥಳಗಳಲ್ಲಿ ಕುಟುಂಬ ನ್ಯಾಯಾಲಯಗಳ ಉಪವೇಶನ ನಡೆಸುವುದು;

(ಗ) ಪಕ್ಷಕಾರರು ಒಂದು ಇತ್ಯರ್ಥಕ್ಕೆ ಬರಲು ನೆರವು ನೀಡಲು ಮತ್ತು ಅವರ ಮನವೊಲಿಸಲು ಕುಟುಂಬ ನ್ಯಾಯಾಲಯವು ಮಾಡಬಹುದಾದಂಥ ಪ್ರಯತ್ನಗಳು ಮತ್ತು ಅನುಸರಿಸಬಹುದಾದ ಪ್ರಕ್ರಿಯೆ.

**22. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**—(1) ಕೇಂದ್ರ ಸರ್ಕಾರವು ಭಾರತದ ಮುಖ್ಯ ನ್ಯಾಯಾಧೀಶರ ಸಹಮತಿಯೊಂದಿಗೆ ಅಧಿಸೂಚನೆಯ ಮೂಲಕ 4ನೆಯ ಪ್ರಕರಣದ (3)ನೇ ಉಪಪ್ರಕರಣದ (ಗ) ಖಂಡದಲ್ಲಿ ಉಲ್ಲೇಖಿಸಲಾದ ನ್ಯಾಯಾಧೀಶನ ನೇಮಕಾತಿಗಾಗಿ ಇತರ ಅರ್ಹತೆಗಳನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಮೇಲೆ ಹೇಳಿದ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ಶರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು, ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗದಂತೆ ಇರತಕ್ಕದ್ದು.

**23. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.**—(1) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು (1)ನೇ ಉಪ ಪ್ರಕರಣದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:—

(ಕ) 4ನೇ ಪ್ರಕರಣದ (6)ನೇ ಉಪ ಪ್ರಕರಣದ ಮೇರೆಗೆ ನ್ಯಾಯಾಧೀಶರಿಗೆ ಸಂದಾಯ ಮಾಡಬೇಕಾದ ವೇತನ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಮತ್ತು ಅವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಖ) 6ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸಲಹೆಗಾರರ ಸಹವರ್ತನೆಯ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅಧಿಕಾರಿಗಳು ಮತ್ತು ಇತರ ನಿಯೋಜಿತರ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು;

(ಗ) ವೈದ್ಯಕೀಯ ಮತ್ತು ಇತರ ಪರಿಣಿತರಿಗೆ ಮತ್ತು 12ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಇತರ ವ್ಯಕ್ತಿಗಳಿಗೆ (ಪ್ರಯಾಣ ವೆಚ್ಚಗಳು ಸೇರಿದಂತೆ) ರಾಜ್ಯ ಸರ್ಕಾರದ ರಾಜಸ್ವದಿಂದ ಫೀಜುಗಳ ಮತ್ತು ವೆಚ್ಚಗಳ ಸಂದಾಯ ಮತ್ತು ಅಂತಹ ಫೀಜುಗಳ ಹಾಗೂ ವೆಚ್ಚಗಳ ಶ್ರೇಣಿಗಳು;

(ಘ) 13ನೇ ಪ್ರಕರಣದ ಮೇರೆಗೆ ನ್ಯಾಯಾಲಯ ಮಿತ್ರರಾಗಿ ನೇಮಕಗೊಂಡ ಕಾನೂನು ವೃತ್ತಿಗರಿಗೆ ರಾಜ್ಯ ಸರ್ಕಾರದ ರಾಜಸ್ವದಿಂದ ಫೀಜುಗಳ ಮತ್ತು ವೆಚ್ಚಗಳ ಸಂದಾಯ ಹಾಗೂ ಅಂಥ ಫೀಜುಗಳು ಮತ್ತು ವೆಚ್ಚಗಳ ಶ್ರೇಣಿಗಳು;

(ಙ) ನಿಯಮಗಳ ಮೂಲಕ ನಿಯಮಿಸಲು ಅಥವಾ ಉಪಬಂಧಿಸಲು ಅಗತ್ಯಪಡಿಸಲಾದಂಥ ಅಥವಾ ನಿಯಮಿಸಬಹುದಾದ ಅಥವಾ ಉಪಬಂಧಿಸಬಹುದಾದಂಥ ಯಾವುದೇ ಇತರ ವಿಷಯ.

3. ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಇರಿಸತಕ್ಕದ್ದು.

ಮೇಲ್ಕಂಡ ಕುಟುಂಬ ನ್ಯಾಯಾಲಯಗಳ ಅಧಿನಿಯಮ, 1984 (1984ರ 66)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ನ ದೆಹಲಿ
ದಿನಾಂಕ:

ಕಾರ್ಯದರ್ಶಿ,
ಭಾರತ ಸರ್ಕಾರ.

The above translation in Kannada of The Family Courts Act, 1984 (66 of 1984) has been authorised by the President to be published in the Official Gazette under clause (a) of section 2 of the Authoritative Texts (Central Laws) Act, 1973.

V. S. RAMADEVI,
Secretary to the Govt. of India.

New Delhi
Date: